ನಿಮ್ಮ ಈ ಪ್ರಶ್ನೆಗೆ ಬಹಳ ಸಕಾರಾತ್ಮಕವಾಗಿ ಉತ್ತರ ಕೊಡತಕ್ಕಂಥದ್ದಿರುವುದರಿಂದ ದಯವಿಟ್ಟು ತಾವು ರೈತ ಸಂಘದ ಹಳೆ ಅಭ್ಯಾಸದ ಪ್ರಕಾರ ಸತ್ಯಾಗ್ರಹ ಪ್ರಾರಂಭ ಮಾಡದಿರಿ... ನಾಳೆಯೇ ನಿಮಗೆ ಸರಿಯಾದಂಥ ಉತ್ತರವನ್ನು ನಾನು ಕೊಡಿಸುತ್ತೇನೆ.

ಶ್ರೀ ಕೆ.ರಘುಪತಿ ಭಟ್ (ಉಡುಪಿ): ಮಾನ್ಯ ಅಧ್ಯಕ್ಷರೆ, ನಾನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಗೆ ಜಿಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಸಸ್ಯಾಹಾರ ಸಾಮಾಗ್ರಿಗಳ ಪೂರೈಕೆ ಬಗ್ಗೆ ಗಮನ ಸೆಳೆಯಲಿಕ್ಕೆ ಇಚ್ಛೆಪಡುತ್ತೇನೆ. ನನಗೆ ಈಗ ಲಭ್ಯವಾಗಿರುವ ಮಾಹಿತಿ ಪ್ರಕಾರ ಸರ್ಕಾರ ಆಸ್ಪತ್ರೆಗಳಿಗೆ ಬೇಕಾದಷ್ಟು ಸಸ್ಯಾಹಾರವನ್ನು ಕೊಡುತ್ತಿದೆ. ಇದು ನನಗೆ ಗೊತ್ತಿರಲಿಲ್ಲ. ಅಲ್ಲಿ ಎಲ್ಲರಿಗೂ ಉಡುಪಿ ಜಿಲ್ಲೆಯ ಆಸ್ಪತ್ರೆಯ... ಪ್ರಾಯಶಃ ನಮ್ಮ ರೋಗಿಗಳು ಮತ್ತೊಮ್ಮೆ ರೋಗಿಗಳು ಆಗಲಿಕ್ಕಿಲ್ಲ. ಸಸ್ಯಾಹಾರ ತೆಗೆದುಕೊಂಡೇ ಗುಣ ಆಗಬಹುದು. ಸರ್ಕಾರ ಅಷ್ಟು ಹಣವನ್ನು ಅದಕ್ಕೆ ಖರ್ಚು ಮಾಡುತ್ತಿದೆ. ಆದರೆ ನಮ್ಮ ಸರ್ಕಾರಿ ಆಸ್ಪತ್ರೆಗಳಲ್ಲಿ ಇದು ಯಾವುದೂ ಸರಿಯಾಗಿ ಪೂರೈಕೆಯಾಗುತ್ತಿಲ್ಲ. ಟೆಂಡರ್ ವಹಿಸಿಕೊಂಡಂಥವರು ರೋಗಿಗಳಿಗೆ ಇವೆಲ್ಲ ಆಹಾರವನ್ನು ಸರಿಯಾಗಿ ಕೊಡುತ್ತಿಲ್ಲ. ಮೊಟ್ಟೆ, ಬಾಳೆಹಣ್ಣು, ಹಾಲು, ಬಾರ್ಲಿ, ಬ್ರೆಡ್ ಇವೆಲ್ಲವನ್ನು ಕೊಡುತ್ತಿದ್ದಾರೆ. ಆದರೆ ನಮ್ಮ ಉಡುಪಿ ಜಿಲ್ಲಾಸ್ಪತ್ರೆಗೆ ಹೋಗಿ ಇದನ್ನು ಪರೀಕ್ಷೆ ಮಾಡಿದೆವು. ಅಲ್ಲಿ ಕೊಡುತ್ತಿಲ್ಲ. ನಮ್ಮ ಕೆಲವು ಶಾಸಕರ ಜೊತೆ ಈ ಬಗ್ಗೆ ಕೇಳಿದಾಗ ರಾಜ್ಯದ ಎಲ್ಲ ಆಸ್ಪತ್ರೆಗಳಲ್ಲಿ ಇದರ ಸಮಸ್ಯೆ ಸಾಮಾನ್ಯವಾಗಿ ಇದೆ ಎಂದು ಹೇಳುತ್ತಿದ್ದಾರೆ. ಆದ್ದರಿಂದ ಮಾನ್ಯ ಆರೋಗ್ಯ ಸಚಿವರು ಬಹಳ ಸ್ಫೂರ್ತಿಯಿಂದ ಕೆಲಸ ಮಾಡುವವರಾಗಿರುವುದರಿಂದ ಇದರ ಕಡೆಗೆ ಗಮನ ಕೊಟ್ಟು, ಸರ್ಕಾರ ಇಷ್ಟು ಕೊಡುವಂಥದ್ದು ರೋಗಿಗಳಿಗೆ ಮುಟ್ಟುತ್ತಿಲ್ಲ. ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕು. ಇನ್ನೊಂದು ವಿಷಯದ ಬಗ್ಗೆ ಈಗಾಗಲೇ ತಮ್ಮ ಗಮನಕ್ಕೆ ತಂದಿದ್ದೇನೆ. ಉಡುಪಿ ಜಿಲ್ಲಾಸ್ಪತ್ರೆಯಲ್ಲಿ ಕಳೆದ 20–25 ವರ್ಷಗಳಿಂದ ಒಬ್ಬರೇ ಇದಕ್ಕೆ ಟೆಂಡರ್ ಹಾಕಿಕೊಳ್ಳುತ್ತಿದ್ದಾರೆ. ಲಕ್ಷಗಟ್ಟಲೆ ಹಣ draw ಮಾಡಿಕೊಳ್ಳುವಂಥದ್ದು, ಅಂದರೆ ಈ ಸಲದ ಟೆಂಡರ್ ಅನ್ನು ಗಂಡ–ಹೆಂಡತಿ, ತಂದೆ ಈ ಮೂರು ಜನರ ಹೆಸರಿನಲ್ಲಿಯೇ ಹಾಕಿಕೊಂಡು ಹೊರಗಿನವರಿಗೆ ಗೊತ್ತಾಗದ ಹಾಗೆ ಒಂದೇ ಕುಟುಂಬದ ವ್ಯಕ್ತಿ ಜಾಸ್ತಿ ಹಣವನ್ನು ಮಾಡಿ ರೋಗಿಗಳಿಗೆ ಪೂರೈಕೆ ಮಾಡುತ್ತಿಲ್ಲ. ಅದರ ಸಲುವಾಗಿ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಸಂಬಂಧಪಟ್ಟ ನಿರ್ದೇಶಕರಿಗೆ ಪತ್ರವನ್ನು ಬರೆದಿದ್ದಾರೆ. ಜಿಲ್ಲಾಧಿಕಾರಿಗಳು ಸಹ ಪತ್ರ ಬರೆದಿದ್ದಾರೆ. ನಮ್ಮ ಜಿಲ್ಲಾ ಸರ್ಜನ್ ರವರು ಈ

ಟೆಂಡರನ್ನು ಮರು ಟೆಂಡರ್ ಮಾಡಬೇಕೆಂದು ಪತ್ರವನ್ನು ಬರೆದಿದ್ದಾರೆ. ನಾನೂ ಸಹ ಪತ್ರ ಬರೆದಿದ್ದೇನೆ. ಆದರೆ ಇವರೆಲ್ಲರ ಜೊತೆಗೆ ಜಿಲ್ಲಾ ಉಸ್ತುವಾರಿ ಸಚಿವರು ಪತ್ರ ಬರೆದ ನಂತರವೂ ನಿರ್ದೇಶಕರು ಈ ಟೆಂಡರನ್ನು ಪಾಸ್ ಮಾಡಿ ಅದೇ ವ್ಯಕ್ತಿಗೆ ಕೊಟ್ಟಿದ್ದಾರೆ. ಆದ್ದರಿಂದ ನನ್ನ ವಿನಂತಿ ಏನೆಂದರೆ 20–25 ವರ್ಷಗಳಿಂದ ಒಬ್ಬರೇ ಇಲ್ಲಿ ಆಸ್ಪತ್ರೆಗೆ ಟೆಂಡರ್ ಹಾಕಿ ಸಸ್ಯಾಹಾರ ಪೂರೈಕೆ ಮಾಡಿ ರೋಗಿಗಳಿಗೆ ಸರಿಯಾದಂಥ ಆಹಾರವನ್ನು ಕೊಡುತ್ತಿಲ್ಲ. ನಮ್ಮ ಉಡುಪಿ ಜಿಲ್ಲಾಸ್ಪತ್ರೆ ಈ ಟೆಂಡರನ್ನು ಮರು ಟೆಂಡರ್ ಮಾಡಿ ಪಾರದರ್ಶಕವಾಗಿ ಎಲ್ಲರೂ ಭಾಗವಹಿಸುವಂತೆ ಒಳ್ಳೆಯ ಟೆಂಡರು ಮಾಡಲಿಕ್ಕೆ ಮಾನ್ಯ ಸಚಿವರು ಅವಕಾಶ ಮಾಡಿಕೊಡಬೇಕು. ಮತ್ತೆ ರಾಜ್ಯದಲ್ಲಿ ಎಲ್ಲಾ ಕಡೆ ಈ ಸಸ್ಯಾಹಾರಕ್ಕೆ ಸರ್ಕಾರ ಇಷ್ಟು ಖರ್ಚು ಮಾಡುವಂಥದ್ದು ರೋಗಿಗಳಿಗೆ ಮುಟ್ಟುತ್ತಿಲ್ಲ. ಅದು ರೋಗಿಗಳಿಗೆ ಮುಟ್ಟುವಂಥ ನಿಟ್ಟಿನಲ್ಲಿ ಪ್ರಯತ್ನ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎನ್. ಚಲುವರಾಯಸ್ವಾಮಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ಎಲ್ಲ ಜಿಲ್ಲಾಸ್ಪತ್ರೆಗಳಲ್ಲಿ ಈ ಒಂದು ವ್ಯವಸ್ಥೆ ಇದೆ. ಈಗಾಗಲೇ ಬಹುಶಃ visit ಮಾಡಿ inspection ಮಾಡಿದಾಗ ಸಾಕಷ್ಟು ಕಡೆ ಪತ್ರಿಕೆಯಲ್ಲಿ ಸಹ ಹೇಳಿದ್ದೇನೆ ಮತ್ತು ನಮ್ಮ ಎಲ್ಲಾ ಶಾಸಕ ಸ್ನೇಹಿತರಿಗೂ ಸಹ 'ನೀವು ಆಗಿಂದಾಗ್ಗೆ ಹೋದಾಗ ಅದರ ಬಗ್ಗೆ ಸ್ವಲ್ಪ ತನಿಖೆ ಮಾಡತಕ್ಕಂಥದ್ದನ್ನು ಮಾಡಬೇಕೆಂತಲೂ' ವಿನಂತಿ ಮಾಡಿಕೊಂಡಿದ್ದೇನೆ. ಉಡುಪಿ ಜಿಲ್ಲಾಸ್ಪತ್ರೆ ಬಗ್ಗೆ ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ, ಅದರ ಬಗ್ಗೆ ನಾನು ವರದಿ ತರಿಸಿಕೊಂಡು, ರದ್ದು ಮಾಡಿ, ಮುಂದಿನ ಟೆಂಡರ್ ಅನ್ನು ಮಾಡಲಿಕ್ಕೆ ಆದೇಶವನ್ನು ಮಾಡುತ್ತೇನೆ. ಅದರ ಬಗ್ಗೆ ನಾಳೆಯೇ ರಿಪೋರ್ಟ್ ತರಿಸಿಕೊಂಡು ಮತ್ತು ಎಲ್ಲಾ District Surgeonಗಳಿಗೂ ಸಹ noticeಅನ್ನು ಕೊಟ್ಟು ಇದನ್ನು ಸರಿಯಾದ ರೀತಿ ಪಾರದರ್ಶಕವಾಗಿ ಮಾಡಿ ರೋಗಿಗಳಿಗೆ supply ಮಾಡಬೇಕೆನ್ನುವುದರ ಬಗ್ಗೆ ಸ್ಪಷ್ಟ ನಿರ್ದೇಶನವನ್ನು ಕೊಡುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ): ಮಾನ್ಯ ಅಧ್ಯಕ್ಷರೆ, ರಾಜ್ಯದ ಎಲ್ಲಾ ಕಡೆ ಸಹಕಾರಿ ಸಂಘಗಳ ಚುನಾವಣೆಯಾಗುತ್ತಿದೆ. ನಮ್ಮ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಕೆಲವು ಘಟನೆಗಳನ್ನು ಯಾವ ರೀತಿಯಲ್ಲಿ ಚುನಾವಣೆಯಾಗುತ್ತಿದೆ ಎಂದು ಸರ್ಕಾರದ ಗಮನಕ್ಕೆ ತರಲು ಇಚ್ಛೆಪಡುತ್ತಿದ್ದೇನೆ. ಒಂದು ಸಹಕಾರಿ ಸಂಸ್ಥೆಯಲ್ಲಿ ಆಭ್ಯರ್ಥಿಗಳು ನಮ್ಮದೇ ಸಹಿ ಎಂದು ಹೇಳಿದರೂ